

## ನಕ್ಕುಬಿಡಿ

ಪಾರ್ಕ್‌ನಲ್ಲಿ ಪಕ್ಕದಲ್ಲಿ ಕುಳಿತ ಅಪರಿಚಿತನೊಬ್ಬ ಅರ್ಧ ಗಂಟೆಯಿಂದ ಆರೋಗ್ಯದ ಬಗ್ಗೆ ತಲೆ ತಿನ್ನುತ್ತಿದ್ದ.

ಅಂದ ಹಾಗೆ, ನೀವು ನೀರನ್ನು ಕುದಿಸಿಯೇ ತಾನೇ ಕುಡಿಯೋದು?

ಓ, ಹೌದು. ನಾನು ನೀರನ್ನು ಮೊದಲು ಗುಳ್ಳೆ ಬರುವವರೆಗೂ ಕುದಿಸಿ, ಆಮೇಲೆ ಫಿಲ್ಟರ್ ಮಾಡಿ, ತಣ್ಣಗಾಗಿಸಿ ಬಚ್ಚಲಿಗೆ ಸುರಿದು ಒಂದು ಬಾಟಲಿ ಬೀರ್ ಕುಡೀತೀನಿ.

***

ಏನಯ್ಯ, ಕೆಲಸ ಶ್ರದ್ಧೆಯಿಂದ ಮಾಡಬೇಕು.

ಆಯ್ತು ಧಣಿ.

ನಿನ್ನ ಹಿಂದಿನ ಕೆಲಸಗಾರ ತಿಜೋರಿಯಿಂದ 5 ಲಕ್ಷ ರೂಪಾಯಿ ಲಪಟಾಯಿಸಿ ಓಡಿಹೋಗಿದ್ದ, ನೀನೂ ಹಾಗೇ ಮಾಡ್ತೀಯಾ?

ಪ್ರಯತ್ನ ಮಾಡ್ತೀನಿ ಧಣಿ.

***

ರೈಲ್ವೆ ಇಲಾಖೆ ತನ್ನ ಉದ್ಯೋಗಿಗಳಿಗೆ ಹೆಲ್ತ್ ಚೆಕಪ್ ನಡೆಸಿತ್ತು.

ಡಾಕ್ಟರ್ ಒಬ್ಬನಿಗೆ ಯಾಕಯ್ಯ, ನಿನ್ನ ಎದೆ ಬಡಿತ ಇಷ್ಟು ಜೋರಾಗಿದೆ?

ನಾನು ಮೆಟ್ರೊ ಗಾಡಿ ಡ್ರೈವರ್ ಸಾರ್

ಮತ್ತೊಬ್ಬನನ್ನು ಪರೀಕ್ಷಿಸಿ ಕೇಳಿದರು, ಅರೆ, ನಿನ್ನ ಎದೆ ಬಡಿತ ಇಷ್ಟೇಕೆ ನಿಧಾನ?

ಏನ್ಮಾಡೋದು ಸಾರ್? ನಾನು ಗೂಡ್ಸ್ ಗಾಡಿ ಡ್ರೈವರ್!

***

ಈ ಐದು ವರ್ಷದಲ್ಲಿ ನಮ್ಮ ಅಳಿಯಂದಿರು ಒಂದೇ ಬಾರಿ ನಮ್ಮ ಮನೆಗೆ ಬಂದಿದ್ದು!

ಹೌದೇ! ಒಂದೇ ಬಾರಿಯೇ?

ಹೌದು! ಒಮ್ಮೆ ಬಂದವರು ಮತ್ತೆ ಹೋಗಿಯೇ ಇಲ್ಲ!

***

ಅಮ್ಮ ತನ್ನ ಮೂವರು ಹೆಣ್ಣು ಮಕ್ಕಳಿಗೆ ತಾನು ಪೇಟೆಗೆ ಹೋಗಿ ಬರುವಷ್ಟರಲ್ಲಿ ಮನೆಗೆಲಸ ಮಾಡಿ ಮುಗಿಸಿರೆಂದು ಹೇಳಿ ಹೋಗಿದ್ದಳು, ಬಂದವಳೇ ಕೆಲಸ ಮುಗಿಸಿದಿರಾ? ಎಂದು ಕೇಳಿದಳು.

ನಾನು ಕಪ್ಪು–ಬಸಿಗಳನ್ನು ತೊಳೆದೆ ಎಂದು ದೊಡ್ಡವಳು ಹೇಳಿದಳು.

ಎರಡನೆಯವಳು ನಾನು ಕಪ್ಪು ಬಸಿ ಒರೆಸಿದೆ ಎಂದಳು.

ಮೂರನೆಯವಳು ನಾನು ಗಾಜಿನ ಚೂರುಗಳನ್ನು ಒಂದೂ ಬಿಡದೆ ಆರಿಸಿ ಹೊರಗೆಸೆದೆ ಎಂದಳು.

***

ರೀ ನಿಮ್ಮ ಮಗ ಕ್ರಿಕೆಟ್ ಚೆಂಡು ಹೊಡೆದು ನನ್ನ ತಲೆಗೆ ಗಾಯ ಮಾಡಿದ್ದಾನೆ!

ಹೌದೇ, ವ್ಹಾವ್! ದಯವಿಟ್ಟು ಆ ಚೆಂಡು ತಂದು ಕೊಡಿ. ಇದುವರೆಗೂ ಅವನು ಹೊಡೆದು ಗಾಯ ಮಾಡಿದ ಚೆಂಡುಗಳನ್ನು ತೆಗೆದಿಟ್ಟಿದ್ದೇನೆ. ಅವನು ದೊಡ್ಡವನಾದ ಮೇಲೆ ಒಂದು ಪ್ರದರ್ಶನ ಮಾಡೋಣಾಂತ.

***

ಟೀಚರ್: ಕೊಟ್ರೇಶ, 1980ರಲ್ಲಿ ಹುಟ್ಟಿದ ನಿಮ್ಮ ಮನೆಯವರಲ್ಲಿ ಇಬ್ಬರಿಗೆ ಈಗ ಎಷ್ಟು ವಯಸ್ಸಾಗಿರುತ್ತೆ?

ಕೊಟ್ರೇಶ: ಟೀಚರ್ ನಮ್ಮ ಅಪ್ಪನಿಗಾದರೆ 41, ಅಮ್ಮನಿಗಾದರೆ 31.

***

ತವರಿನಿಂದ ತನ್ನ ತಾಯಿಯೊಡನೆ ಬಂದ ಪತ್ನಿಗೆ ರಾಮು ಕೇಳಿದ.

ನಿನ್ನ ತಾಯಿ ಇಲ್ಲಿಗೆ ಬರುವುದು ಬೇಡ ಅಂತ ಪತ್ರವನ್ನು ಬರೆದಿದ್ದೆನಲ್ಲ?

ಅದೇ, ಯಾಕೆ ಆ ರೀತಿ ಬರೆದಿದ್ದೀರಿ ಅಂತ ಕೇಳಲು ಅವರೇ ಬಂದಿದ್ದಾರೆ.

***

ಎರಡು ಬಾರಿ ಮತದಾನ ಮಾಡಿದ್ದಾನೆಂದು ನ್ಯಾಯಾಲಯಕ್ಕೆ ಕರೆ ತಂದಿದ್ದರು.

ಜಡ್ಜ್: ಏನಯ್ಯ, ಎರಡು ಬಾರಿ ಮತದಾನ ಮಾಡಿ ಮೋಸ ಮಾಡಿದ್ದೀಯಂತೆ?

ಮತದಾರ: ಬುದ್ಧಿ, ಅವರೇ ಮೋಸ ಮಾಡಿರೋದು, ಒಂದರದ್ದು ಮಾತ್ರ ದುಡ್ಡು ಕೊಟ್ಟಿದ್ದಾರೆ!

(ಸಂಗ್ರಹ): ಕೆ. ಶ್ರೀನಿವಾಸರಾವ್




ಹೆಂಡತಿ: ರೀ... ಗಂಟೆ ಎಂಟಾಯಿತು, ಬೇಗ ಏಳ್ರೀ.

ಗುಂಡ: ಯಾವುದಾದರೂ ಒಳ್ಳೆಯ ವಿಷಯ ಹೇಳು ಬೇಗ ಏಳೋತರ.

ಹೆಂಡತಿ: ನಿನ್ನೆ ರಾತ್ರಿ ಹನ್ನೆರಡು ಗಂಟೆವರೆಗೂ ವಾಟ್ಸ್‌ಆ್ಯಪ್‌ನಲ್ಲಿ ನೀವು ಚಾಟ್ ಮಾಡಿದ್ರಲ್ಲಾ ಅದು ನನ್ನದೇ ಹೊಸ ನಂಬರ್!

***

ನದಿಗಳಿಗೇಕೆ ಹೆಂಗಸರ ಹೆಸರು? ಪರ್ವತಗಳಿಗೇಕೆ ಗಂಡಸರ ಹೆಸರು?

ಕೂತ ಕಡೆ ಕೂರಲ್ಲ ಹೆಂಗಸರು! ಓಡಾಡ್ತಿರಬೇಕು. ಅದಕ್ಕೇ ನದಿಗಳಿಗೆ ಹೆಂಗಸರ ಹೆಸರು!

ಕೂತ ಕಡೆಯಿಂದ ಕದಲೋದಿಲ್ಲ ಗಂಡಸರು.. ಎಲ್ಲಾ ಕೂತಲ್ಲೇ ಆಗಬೇಕು.. ಅದಕ್ಕೇ ಪರ್ವತಗಳಿಗೆ ಗಂಡಸರ ಹೆಸರು.

***

ಮೇಡಂ: ಮೆದುಳಿನ ವಿಶೇಷ ಏನು?

ಗುಂಡ: ಇದು ದಿನದ 24 ಗಂಟೆನೂ ಕೆಲಸ ಮಾಡುತ್ತದೆ ಆದರೆ ಪರೀಕ್ಷೆಯ ಟೈಂನಲ್ಲಿ ಕೈ ಕೊಡುತ್ತದೆ...

(ಸಂಗ್ರಹ): ಪ.ನಾ.ಹಳ್ಳಿ ಹರೀಶ್ ಕುಮಾರ್


